**ಸಿಸಿ ಸಂಃ 1100/2015**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಹೊಸಕೋಟೆ**

| | |
|---|---|
| ಸಾಕ್ಷಿದಾರರ ಹೆಸರು : ಮನ್ಸೂರ್ ಅಲಿ ಖಾನ್ | ಪಿ ಡಬ್ಲ್ಯೂ -8 ಸಿ ಡಬ್ಲ್ಯೂ - 4 |
| ತಂದೆ ಹೆಸರುಃ ಅಹಮದ್ ಅಲಿ ಖಾನ್ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿ:03.02.2026 |
| ವಯಸ್ಸುಃ 31 ವರ್ಷ | |
| ವೃತ್ತಿಃ ಚಾಲಕ | |
| ವಾಸ ಸ್ಥಳಃ ಮದನಪಲ್ಲಿ, ಚಿತ್ತೂರು, ಆಂಧ್ರಪ್ರದೇಶ | |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ</u>**

ನಿ.ಪಿ.2 ರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **Ex.P-2(ಡಿ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 10-12 ವರ್ಷಗಳ ಹಿಂದೆ ನಂದಗುಡಿ ಪೋಲೀಸ್ ಠಾಣೆಗೆ ಹೋದಾಗ ಪೋಲಿಸರ ಹೇಳಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಯಾವ ವಿಚಾರಕ್ಕೆ ಸದರಿ ಸಹಿಯನ್ನು ಮಾಡಿರುತ್ತೇನೆ ಎಂದು ನನಗೆ ತಿಳಿದಿರುವುದಿಲ್ಲ. ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ನನ್ನ ಮುಂದೆ ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ವಿಚಾರಿಸಬೇಕಾಗಿ ಎಪಿಪಿರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಬೇಕಾಗಿ ನ್ಯಾಯಾಲಯದಲ್ಲಿ ವಿನಂತಿಸಿದ ಮೇರೆಗೆ ಅನುಮತಿಯನ್ನು ನೀಡಿರುತ್ತದೆ.)**

**<u>ಪಾಟೀ ಸವಾಲುಃ ಸರ್ಕಾರದ ಪರವಾಗಿ ಎಪಿಪಿ ರವರಿಂದಃ</u>**

ದಿ.30.03.2015 ರಂದು ಬೆಳಗ್ಗೆ 8.00-9.00 ಗಂಟೆಯವರೆಗೆ ಚಾ.ಸಾ.1 ರವರು

ತೋರಿಸಿದ ಘಟನಾ ಸ್ಥಳವಾದ ನಂದಗುಡಿ ಹೋ., ಭೀಮಕನ ಹಳ್ಳಿ ನ್ಯೂ ಹಾರಿಜನ್ ಹೈಸ್ಕೂಲ್ ಬಳಿ, ಹೊಸಕೋಟೆ - ಚಿಂತಾಮಣಿ ರಸ್ತೆಯಲ್ಲಿ ಚಿಕ್ಕಮುನಿಶಾಮಪ್ಪರವರ ಜಮೀನಿನ ನೇರದ ರಸ್ತೆಯಲ್ಲಿ ಅಪಘಾತ ಪ್ರಕರಣದ ಸಂಬಂಧಪಟ್ಟಂತೆ ನನ್ನ, ಚಾ.ಸಾ.1 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯ ಕ್ರಮ ಜರುಗಿಸಿ, ಅಘಾತಕ್ಕೆ ಒಳಪಟ್ಟ ಕೆ.ಎ.01-ಎ-ಬಿ-8152 ಬಜಾಜ್ ಕಂಪನಿಯ ಆಟೋ ಮತ್ತು ಕೆ.ಎ.01-ಎಂ.ಬಿ-6910 ಮಾರುತಿ 800 ಕಾರನ್ನು ಅಮಾನತ್ತುಪಡಿಸಿಕೊಂಡು ಬರೆದ ಪಂಚನಾಮೆಗೆ ನಾನು, ಚಾಸಾ-1 ಮತ್ತು 3 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈಗ ನಾನು ಮತ್ತು ಆರೋಪಿ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿದ್ದರಿಂದ, ಆರೋಪಿ ಪರ ಪಾಟೀ ಸವಾಲನ್ನು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸಕೋಟೆ